# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಅರಕಲಗೂಡು

ಸಿ.ಸಿ.ನಂ.641/2022

ದಿನಾಂಕಃ 25-09-2024

ಪಿರ್ಯಾದಿ ಃ- ಕೊಣನೂರು ಪೊಲೀಸರು

--------- ಪಿರ್ಯಾದಿದಾರ

: ವಿರುದ್ಧ :

ಆರೋಪಿ ಃ- ಶ್ರೀನಿವಾಸ

------ಆರೋಪಿ

ಆಪಾದನೆ

ನಾನು ಶ್ರೀಮತಿ. ಚೇತನಾ., ಬಿ.ಎ.ಎಲ್.ಎಲ್.ಬಿ,. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು ಆದ ನಾನು ಆರೋಪಿಯಾದ ನೀವುಃ

3. ಶ್ರೀನಿವಾಸ ಬಿನ್ ನಾಗರಾಜ ,<br>
ವಯಸುಃ 22 ವರ್ಷ,<br>
ವಾಸಃಅಕ್ಕಿಮಂಟಿ ಕೂಡ್ಲೂರು ಗ್ರಾಮ,<br>
ಕುಶಾಲನಗರ ಹೋಬಳಿ,<br>
ಸೋಮವಾರಪೇಟೆ ತಾಲ್ಲೂಕು.

ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

ದಿನಾಂಕಃ 19-01-2022ರಂದು ಸಂಜೆ 5.320 ಗಂಟೆ ಸಮಯದಲ್ಲಿ ಅರಕಲಗೂಡು ತಾಲ್ಲೂಕು, ರಾಮನಾಥಪುರ ಹೋಬಳಿ, ಕೂಡಲೂರು ಗ್ರಾಮದ ಶಿವಣ್ಣರವರ ತೆಂಗಿನ ತೋಟದ ಮುಂಭಾಗ ಹಾದುಹೋಗಿರುವ ಕೊಣನೂರು-ರಾಮನಾಥಪುರ ಟಾರು ರಸ್ತೆಯ ಎಡಭಾಗದ ಪಾದಾಚಾರಿಗಳು ತಿರುಗಾಡುವ ಸ್ಥಳದಲ್ಲಿ ಸಾಕ್ಷಿ-1ಮಹೇಶರವರು ತಮ್ಮ ಬಾಬ್ತು ಕೆಎ-13ಈಸಿ-5887ರ ಹೀರೋ ಸ್ಪೆಂಡರ್ ಪ್ರೋ ಬೈಕ್ ನ್ನು ನಿಲ್ಲಿಸಿ ಕೆಲಸಕ್ಕೆ ಹೋಗಿ ಕೆಲಸ ಮುಗಿಸಿಕೊಂಡು ಪುನಃ

ಸಂಜೆ 6.20 ಗಂಟೆಗೆ ಬಂದು ನೋಡಿದಾಗ ಬೈಕ್ ನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು, 3ನೇ ಆರೋಪಿಯಾದ ನೀವು 1 ಮತ್ತು 2ನೇ ಆರೋಪಿಗಳೊಂದಿಗೆ ಸೇರಿ ಮೇಲ್ಕಂಡ ಬೈಕ್ ನ ಹ್ಯಾಂಡ್ ಲಾಕ್ ಮುರಿದು ಕಳ್ಳತನ ಮಾಡಿಕೊಂಡು ಹೋಗಿರುತ್ತೀರಿ. ಆದುದರಿಂದ ಭಾ.ದಂ.ಸಂ.ಕಲಂಃ379 ರನ್ವಯ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿದ್ದೀರಿ. ಆದ್ದರಿಂದ ಸದರಿ ಅಪರಾಧವು ನನ್ನ ವಿಚಾರಧೀನ ಅಪರಾಧವಾಗಿದೆ.

(ಈ ಆಪಾದನೆಯ ಅಂಶಗಳನ್ನು ಶೀಘ್ರಲಿಪಿಗಾರರಿಗೆ **ಉಕ್ತಲೇಖನ** ನೀಡಿ ಬೆರಳಚ್ಚು ಮಾಡಿ ತಿದ್ದುಪಡಿ ಮಾಡಿದ ನಂತರ ಸದರಿ ಆರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಈ ಹೊತ್ತು **ದಿನಾಂಕಃ25ನೇ ಸೆಪ್ಟೆಂಬರ್** -2024 )

ಶ್ರೀಮತಿ. ಚೇತನಾ
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿಅರಕಲಗೂಡು.